ಅಧ್ಯಕ್ಷರು : ಮಾನ್ಯ ಸದಸ್ಯರು ಬೇಕಾದರೆ ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ.

**ಬೆಂಗಳೂರು ನಗರ ಜಿಲ್ಲೆಯಲ್ಲಿ ಅಬಕಾರಿ ವಾಣಿಜ್ಯ ತೆರಿಗೆ ಮತ್ತು ಮಿಸಲೇನಿಯಸ್ ಬಾಕಿ**

177 ( 1559) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ : 1-2-2000ದವರಿಗೆ ಬಾಕಿ ಮತ್ತು ಇರುವ ಅಬಕಾರಿ ವಾಣಿಜ್ಯ ತೆರಿಗೆ ಮತ್ತು ಇತರೆ ಮಿಸಲೇನಿಯಸ್ ಬಾಕಿ ಎಷ್ಟು? ಕಳೆದ ಒಂದು ವರ್ಷದಲ್ಲಿ ಈ ಬಾಬ್ತುಗಳಲ್ಲಿ ವಸೂಲಾದ ಮೊತ್ತವೆಷ್ಟು?

2) ಬೆಂಗಳೂರು ನಗರ ಜಿಲ್ಲೆಯಲ್ಲಿ ವಿಶೇಷ ತಹಸೀಲ್ದಾರ್ ಹುದ್ದೆ ವಿಶೇಷವಾಗಿ ಸೃಷ್ಟಿಸಿದ್ದರೂ ಈ ಮಿಸಲೇನಿಯಸ್ ಬಾಕಿ ವಸೂಲಾಗದಿರಲು ಕಾರಣವೇನು? ಈ ಹುದ್ದೆಗಳನ್ನು ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1) ವಿವಿಧ ಶೀರ್ಷಿಕೆ ಅಡಿ ಭೂ ಕಂದಾಯ ಬಾಕಿ ಎಂದು ವಸೂಲಾಗಬೇಕಾಗಿರುವ ಮೊತ್ತವು ಈ ಕೆಳಕಂಡಂತಿದೆ.

| ಕ್ರ. ಸಂ. | ಬಾಬ್ತುವಾರು | 1.2.2000ಕ್ಕೆ ಬಾಕಿ (ಲಕ್ಷರೂಗಳಲ್ಲಿ) | ದಿ: 1-7-98ರಿಂದ 30.6.99ರವರೆಗೆ ವಸೂಲಿ (ಕಳೆದ ಕಂದಾಯ ವರ್ಷ) (ಲಕ್ಷರೂಗಳಲ್ಲಿ) |
|---|---|---|---|
| 1) | ವಾಣಿಜ್ಯ ತೆರಿಗೆ | 106.49 | 5.84 |
| 2) | ಅಬಕಾರಿ ತೆರಿಗೆ | 312.05 | 71.49 |
| 3) | ಇತರೆ ಮಿಸ್‌ಲೇನಿಯಸ್ ಬಾಕಿ | 817.16 | 140.04 |
| | **ಒಟ್ಟು:** | **1235.70** | **217.37** |

2) ಈ ಮೇಲಿನ ವಸೂಲಾತಿಯು ವಿಶೇಷ ತಹಸೀಲ್ದಾರರ ವಿಶೇಷ ಕಾರ್ಯಾಚರಣೆಯಿಂದ ಹಾಗೂ ಪ್ರಯತ್ನಗಳಿಂದ ವಸೂಲಾತಿಮಾಡಲು ಸಾಧ್ಯವಾಗಿರುತ್ತದೆ. ಈ ಹುದ್ದೆಗಳು ಇಲ್ಲದಿದ್ದಲ್ಲಿ ವಸೂಲಿ ಮಾಡಲು ಅನಾನುಕೂಲವಾಗುತ್ತದೆ. ವಿಶೇಷ ತಹಸೀಲ್ದಾರ್‌ರವರ ಹುದ್ದೆ ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿವರು ನನ್ನ ಪ್ರಶ್ನೆಗಳಿಗೆ ಉತ್ತರವನ್ನೇನೋ ಕೊಟ್ಟಿದ್ದಾರೆ. ಬೆಂಗಳೂರು ನಗರ ಹಾಗೂ ಜಿಲ್ಲೆಯಲ್ಲಿ ದಿನಾಂಕ 1-7-1999ರಿಂದ 31-12-1999ರವರಗೆ ಐದು ತಿಂಗಳುಗಳಲ್ಲಿ 61 1/2 ಲಕ್ಷ ರೂಪಾಯಿಗಳು ವಸೂಲಾಗಿದೆ. ಯಾರ್ಯಾರಿಂದ ಇದು ವಸಾಲಾಗಿದೆ ಎಂಬ ಬಗ್ಗೆ ಅವರು ಹೇಳಬೇಕು. ಇನ್ನೂ ಎಷ್ಟು ಬಾಕಿ ವಸೂಲಾಗಬೇಕಾಗಿದೆ ಎಂಬ ಬಗ್ಗೆ ಕೂಡ ಅವರು ಹೇಳಬೇಕು. ಇದಲ್ಲದೇ ವಾಣಿಜ್ಯ ತೆರಿಗೆಯಲ್ಲಿ 557.8ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಲು ಆಗಿರುವ ತೊಂದರೆ ಏನು ಎಂಬ ಬಗ್ಗೆ ಹೇಳಬೇಕು. ಇನ್ನೂ ಕೈ ಕಾಲು ಕಳೆದುಕೊಂಡ ಹಾಗೂ ಜೀವ ಕಳೆದುಕೊಂಡ ಕಾರ್ಮಿಕ ಕುಟುಂಬಗಳಿಗೆ ಮಾಲೀಕರು ಕೊಡಬೇಕಾದ ಪರಿಹಾರದ ಹಣವನ್ನು ಕಳೆದ ಹತ್ತಾರು ವರ್ಷಗಳಿಂದ ವಸೂಲಿಯೇ ಮಾಡಿಲ್ಲ. ಈ ರೀತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಂದರಿಂದಲೇ ಸುಮಾರು 1.1 ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿರುತ್ತದೆ. ಇದರಲ್ಲಿ ಒಂದು ಪೈಸೆ ಕೂಡ ವಸೂಲಾಗಿಲ್ಲ. ಹೀಗಾದರೆ ಆ ಕಾರ್ಮಿಕರ ಗತಿ ಏನಾಗಬೇಕು? ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ವಸೂಲಿ ಮಾಡತಕ್ಕಂಥ ಕಾರ್ಯಕ್ರಮ ನಿರಂತರವಾಗಿ ನಡೆಯತಕ್ಕಂಥ ಕಾರ್ಯಕ್ರಮವಾಗಿದೆ. ನಾವು ಎಷ್ಟು ಬಿಗಿಯನ್ನು ಮಾಡುತ್ತೇವೋ ಆದಕ್ಕೆ ತಕ್ಕಂತೆ ತೆರಿಗೆ ಹಣ ಕಟ್ಟಲು ತಪ್ಪಿಸಿ ಕೊಳ್ಳುವುದಕ್ಕೆ ಎಷ್ಟು ವಿಧಾನಗಳನ್ನು ಸುಸ್ತಿದಾರರು ಬಳಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ ಎನ್ನುವ ವಿಚಾರ ಮಾನ್ಯ ಸದಸ್ಯರ ಅನುಭವಕ್ಕೆ ಬಂದಿರಬಹುದೆಂಬ ನಾನಾದರೂ ಭಾವಿಸುತ್ತೇನೆ. ಆದುದರಿಂದ ಇಂದು ನಾನಾ ಹೆಡ್‌ಗಳಲ್ಲಿ ಅಂದರೆ ವಾಣಿಜ್ಯ ತೆರಿಗೆ, ಅಬಕಾರಿ, ವಿದ್ಯುಚ್ಛಕ್ತಿ, ಮುದ್ರಾಂಕ, ಸಾರಿಗೆ, ಬ್ಯಾಂಕ್ ಸಾಲ, ರಾಜ್ಯ ಹಾಗೂ ಕೇಂದ್ರದ ನಾನಾ ಸೆಕ್ಟರ್‌ಗಳಲ್ಲಿ ಈ ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವವರಿದ್ದಾರೆ. ಇದನ್ನು ವಸೂಲು ಮಾಡುವುದಕ್ಕೆ ತೀಕ್ಷಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದೇ ಸರ್ಕಾರದ ನಿ ಧ ರ ವ ಾ ಗಿ ದ .

ಈ ಅಬಕಾರಿ ವ್ಯವಹಾರದಲ್ಲಿ ಬಹಳಷ್ಟು ಬೇನಾಮಿ ಟ್ರಾನ್ಸಾಕ್ಷನ್ ಇರತಕ್ಕಂಥ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಆದುದರಿಂದ ಅಲ್ಲಿಯೂ ಕೂಡ ಈ ಬೇನಾಮಿಗಳು ಮತ್ತು ಅಸಲಿ ಮಧ್ಯೆ ಇವೆರಡರ ಮಧ್ಯೆ ನಾವು ಬಡಿದಾಡಬೇಕಾಗುತ್ತದೆ. ಅದನ್ನು ನಾವು ಮುಂದುವರೆಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಪಿ.ಸಿ. ಮೋಹನ್ : ಕೈಕಾಲು ಮತ್ತು ಜೀವ ಕಳೆದುಕೊಂಡ ಕಾರ್ಮಿಕರ ಕುಟುಂಬಗಳಿಗೆ ಪರಿಹಾರವನ್ನು ಮಾಲೀಕರಿಂದ ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳವುದಕ್ಕೆ ಮತ್ತು ಆ ಹಣ ಆ ಕುಟುಂಬದವರಿಗೆ ದೊರಕಲು ಸರ್ಕಾರ ಏನಾದರೂ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ ಕೃಷ್ಣ : ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಹಾಗೂ ಅದಕ್ಕೆ ಬೇಕಾದ ಕಾರ್ಯಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇವರು ಉತ್ತರದಲ್ಲಿ ದಿನಾಂಕ 1-2-2000ಕ್ಕೆ ಅಬಕಾರಿ ತೆರಿಗೆ 3.12 ಕೋಟಿ ರೂಪಾಯಿಗಳು ಬರಬೇಕಾಗಿದೆ ಎಂದು ಕೊಟ್ಟಿದ್ದಾರೆ. ನನ್ನ ಗಮನಕ್ಕೆ

ಬಂದಿರುವ ಹಾಗೆ ಮೆ|| ದಾಸಪ್ಪ ಅಂಡ್ ಕೋ-ನವರೇ ಬೆಂಗಳೂರಿನಲ್ಲಿ 10,71,61, 600-00 ರೂಪಾಯಿಗಳ ಬಾಕಿಯನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ ತಮ್ಮ ಮುಖೇನ ನಾನು ಸರ್ಕಾರದ ಗಮನಕ್ಕೆ ತರಬಯಸುವ ವಿಷಯವೆಂದರೆ, ಕರ್ನಾಟಕ ಎಕ್ಸ್ಸೈಸ್, ಸೆಕ್ಷನ್ 64ರ ಪ್ರಕಾರ "In the event of any default by any person, liceneed or holding lease under this Act, all his distillery, brewery or warehouse or shop or premises, fitting..... shall be liable to be attached in satisfaction of any claim for such excise revenus ಎಂದು ಇದೆ. ಈ ಒಂದು ಅಧಿಕಾರ ಸರ್ಕಾರಕ್ಕಿರುವಾಗ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿಯೇ ಒಬ್ಬರೇ ಒಬ್ಬರು ಹತ್ತು ಕೋಟಿ ಎಪ್ಪತ್ತೊಂದು ಲಕ್ಷ ರೂಪಾಯಿಗಳ ಬಾಕಿಯನ್ನು ಉಳಿಸಿ ಕೊಂಡಿರುವಾಗ ಇವರ ಮೇಲೆ ಸರ್ಕಾರ ಏಕೆ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ? ಆ ಕಂಟ್ರಾಕ್ಟರ್‌ನಿಂದ ಈ ಬಾಕಿಯನ್ನು ವಸೂಲು ಮಾಡಲು ಸರ್ಕಾರ ಏಕೆ ಪ್ರಯತ್ನ ಪಡುತ್ತಿಲ್ಲವೆನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ : ಈ ವ್ಯವಹಾರದಲ್ಲಿ ಈ ಬೇನಾಮಿಗಳ ಭಾಧೆಯಿಂದ ಜವಾಬ್ದಾರಿಕೆಯನ್ನು ಫಿಕ್ಸ್ ಮಾಡುವುದಕ್ಕೆ ಅಗಿಂದಾಗ್ಗೆ ತೊಂದರೆಗಳು ಉದ್ಭವವಾಗುತ್ತದೆ. ಆದರೆ ಈ ಬಗ್ಗೆ ಮಾನ್ಯ ಸದಸ್ಯರು ಯಾವ ಸೆಕ್ಷನ್ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೋ ಆ ಸೆಕ್ಷನ್‌ನ್ನು ನಾವು ಉಪಯೋಗಿಸುತ್ತೇವೆ.

**ರಾಜ್ಯದ ಅಲ್ಪಸಂಖ್ಯಾತರಿಗಾಗಿ ಮೈನಾರಟಿ ಕಮಿಷನ್ ನೇಮಕದ ಬಗ್ಗೆ**

198 (1549) ಶ್ರೀಎ. ರಾಮದಾಸ್ (ಕೃಷ್ಣ ರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರಿಗಾಗಿ ಕಮಿಷನ್ (ಮೈನಾರಿಟಿ ಕಮಿಷನ್) ಎಂದು ಯಾವ ಸರ್ಕಾರಿ ಆದೇಶದಂತೆ ನೇಮಿಸಲಾಗಿತ್ತು? (ಆದೇಶದ ಪ್ರತಿ ನೀಡುವುದು) ಈ ಕಮಿಷನ್ನ ಧ್ಯೆಯೋದ್ದೇಶಗಳು ಏನು? (ಪ್ರತಿ ನೀಡುವುದು)

ಆ) ಈವರೆಗೆ ಈ ಕಮಿಷನ್ನಿನ ಅಧ್ಯಕ್ಷತೆ ವಹಿಸಿದವರು ಯಾರು ಯಾರು? ಮತ್ತು ಅವರ ಕೆಲಸ ನಿರ್ವಹಿಸಿದ ಅವಧಿ ವಿವರ ನೀಡಿ.

ಇ) ಅಲ್ಪಸಂಖ್ಯಾಂತರ ಆಯೋಗಕ್ಕೆ ಕೇವಲ ಒಂದೇ ಜಾತಿಯವರು ಅಧ್ಯಕ್ಷರಾಗಿ ನೇಮಿಸಲ್ಪಡುತ್ತಿರುವುದರ ಹಿನ್ನೆಲೆ ಏನು? ಇತರೆ ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದವರನ್ನು ಕನಿಷ್ಠ 2 ವರ್ಷದ ಅವಧಿಗೊಬ್ಬರಂತೆ ನೇಮಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

ಅ) 1983ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 1 ಎಂಎಂಆರ್ 83 ದಿನಾಂಕ9-5-1983ರಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಮೊಟ್ಟ ಮೊದಲನೆಯದಾಗಿ ರಚಿಸಲಾಗಿತ್ತು (ಪ್ರತಿ ಲಗತ್ತಿಸಲಾಗಿದೆ - ಅನುಬಂಧ-1)